ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 849
ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 20-09-2021
ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಕೇಂದ್ರದ ಕಾಮಗಾರಿಯು ಪೂರ್ಣಗೊಂಡು ಲೋಕಾರ್ಪಣೆಗೊಳಿಸಲಾಗಿದೆಯೆ;	ಲೋಕಾರ್ಪಣೆಗೊಳಿಸಲಾಗಿರುವುದಿಲ್ಲ. ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಕಟ್ಟಡದ ಕಾಮಗಾರಿಗೆ ಸಂಬಂಧಿಸಿದಂತೆ ಪ್ರಸ್ತುತ ಐನ್‌ಮನೆಗಳ ಮೇಲ್ಛಾವಣಿ ಕೆಲಸ ಪೂರ್ಣಗೊಂಡಿದ್ದು, ನೆಲಹಾಸು, ವಿದ್ಯುದೀಕರಣ ಹಾಗೂ ಇತರೆ ಕೆಲಸಗಳು ಪ್ರಗತಿಯಲ್ಲಿದೆ.
ಆ)	ಸದರಿ ಕಾಮಗಾರಿಯು ಅನುಮೋದನೆಗೊಂಡ ವರ್ಷ ಯಾವುದು; ಹಾಗೂ ಕಾಮಗಾರಿಯು ಯಾವ ವರ್ಷ ಮುಕ್ತಾಯಗೊಂಡಿದೆ;	ಸದರಿ ಕಾಮಗಾರಿಯು 2010-11ನೇ ಸಾಲಿನಲ್ಲಿ ಅನುಮೋದನೆಗೊಂಡಿರುತ್ತದೆ. ಗುತ್ತಿಗೆದಾರರು ಕಾಮಗಾರಿ ಪೂರ್ಣಗೊಳಿಸಲು ವಿಫಲರಾದ ಕಾರಣ ಗುತ್ತಿಗೆ ಕರಾರನ್ನು "ಗುತ್ತಿಗೆದಾರರ ಹೊಣೆ ಮತ್ತು ಜವಾಬ್ದಾರಿ ಮೇಲೆ" ರದ್ದುಗೊಳಿಸಲಾಗಿರುತ್ತದೆ. ಉಳಿಕೆ ಕಾಮಗಾರಿಗೆ ಟೆಂಡರ್ ಕರೆದು ಗುತ್ತಿಗೆ ವಹಿಸಲಾಗಿದ್ದು, ಡಿಸೆಂಬರ್-2021ರ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸಲು ಯೋಜಿಸಲಾಗಿದೆ.
ಇ)	ಆ ಕಾಮಗಾರಿಗೆ ಮಂಜೂರಾಗಿರುವ ಬಿಡುಗಡೆಯಾಗಿರುವ ಹಾಗೂ ವಿನಿಯೋಗಿಸಿರುವ ಅನುದಾನದ ವಿವರಗಳನ್ನು ನೀಡುವುದು?	ಈ ಕಾಮಗಾರಿಯ ಅಂದಾಜು ಮೊತ್ತ ರೂ.330.45 ಲಕ್ಷಗಳಾಗಿದ್ದು, ಇದುವರೆವಿಗೂ ರೂ.253.54 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಕಾಮಗಾರಿಗೆ ಈವರೆವಿಗೂ ವಿನಿಯೋಗಿಸಿರುವ ಮೊತ್ತ ರೂ.250.39 ಲಕ್ಷಗಳಾಗಿರುತ್ತದೆ.

TOR 191 TDV 2021

(ಆನಂದ್ ಸಿಂಗ್)
ಪ್ರವಾಸೋದ್ಯಮ ಹಾಗೂ
ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರು